R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ– IV<br>**Part– IV** | ಬೆಂಗಳೂರು, ಶುಕ್ರವಾರ, ೧೦ , ಏಪ್ರಿಲ್, ೨೦೨೦ (ಚೈತ್ರ ೨೧, ಶಕವರ್ಷ ೧೯೪೨)<br>**Bengaluru, FRIDAY,10 , APRIL,2020 (Chaithra 21, ShakaVarsha 1942)** | ನಂ. ೧೩೩<br>**No. 133** |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 24 ಶಾಸನ 2020, ಬೆಂಗಳೂರು ದಿನಾಂಕ: 10.04.2020.**

**ಅಧಿಸೂಚನೆ**

ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ಅಧ್ಯಾದೇಶ, 2020 ಇದಕ್ಕೆ 2020ರ ಏಪ್ರಿಲ್ ತಿಂಗಳ 09ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 06 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020ರ ಕರ್ನಾಟಕಅಧ್ಯಾದೇಶಸಂಖ್ಯೆ: 06**

**ಕರ್ನಾಟಕಭೂಕಬಳಿಕೆನಿಷೇಧ (ತಿದ್ದುಪಡಿ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಏಪ್ರಿಲ್ 10 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011ನ್ನು (2014ರ ಕರ್ನಾಟಕ ಅಧಿನಿಯಮ 38) ಮತ್ತಷ್ಟು ತಿದ್ದುಪಡಿ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕ ವಿಷಯಗಳಿಗಾಗಿ ಒಂದುಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶ್ರೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ**.-ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011ರ (2014ರ ಕರ್ನಾಟಕ ಅಧಿನಿಯಮ 38) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (ಡಿ) ಖಂಡದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು, ಎಂದರೆ:-

"ಪರಂತು, ಈ ಅಧ್ಯಾದೇಶದ ಪ್ರಾರಂಭದ ದಿನಾಂಕದಂದು ಮಂಜೂರಾತಿಗಾಗಿ ಬಾಕಿಯಿರುವ ಅರ್ಜಿಗಳ ಸಂದರ್ಭದಲ್ಲಿ "ಭೂಮಿ" ಎಂಬುದು,-

(ಎ) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 94ಎ, 94ಬಿ, 94ಸಿ ಮತ್ತು 94ಸಿಸಿ ಪ್ರಕರಣಗಳ ಅಡಿಯಲ್ಲಿನ;

(ಬಿ) ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಸಾಂಪ್ರದಾಯಿಕ ಅರಣ್ಯ ನಿವಾಸಿಗಳ (ಅರಣ್ಯ ಹಕ್ಕುಗಳ ಗುರುತಿಸುವಿಕೆ) ಅಧಿನಿಯಮ, 2006ರ (2007ರ ಕೇಂದ್ರ ಅಧಿನಿಯಮ 2) ಅಡಿಯಲ್ಲಿನ;

ಭೂಮಿಗಳನ್ನು ಒಳಗೊಳ್ಳುವುದಿಲ್ಲ.

**3. 9ನೇ ಪ್ರಕರಣದ ತಿದ್ದುಪಡಿ.-**ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ,-

(i) (3)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ**:-**

"(3) ಎಲ್ಲಾ ಆರೋಪಿತ ಭೂ ಕಬಳಿಕೆ ಕೃತ್ಯಗಳು, ಕಬಳಿಸಲಾದ ಭೂಮಿ ಎಲ್ಲಿದೆಯೋ ಆ ಪ್ರದೇಶಕ್ಕಾಗಿ ರಚಿಸಲಾದ ವಿಶೇಷ ನ್ಯಾಯಾಲಯ ಮಾತ್ರವೇ ಅಥವಾ ಅಂಥ ಪ್ರದೇಶಕ್ಕಾಗಿ ಒಂದಕ್ಕಿಂತ ಹೆಚ್ಚಿನ ವಿಶೇಷ ನ್ಯಾಯಾಲಯಗಳಿದ್ದರೆ, ಅವುಗಳ ಪೈಕಿ ಸರ್ಕಾರವು ಈ ಕುರಿತು ನಿರ್ದಿಷ್ಟಪಡಿಸಬಹುದಾದ ಅಂಥ ಒಂದರಲ್ಲಿ ವಿಚಾರಣೆಯನ್ನು ಮಾಡತಕ್ಕದ್ದು."

(ii) (5)ನೇ ಉಪ ಪ್ರಕರಣದಲ್ಲಿ, (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ವಿಶೇಷ ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಿದಲ್ಲಿ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಕ್ಷಿಪ್ರವಾಗಿ ವಿಚಾರಣೆ ಮಾಡಬಹುದು:

ಪರಂತು, ವ್ಯವಹರಣೆಯನ್ನು ನಡೆಸಲು ಸಾಕಷ್ಟು ಆಧಾರಗಳು ಇಲ್ಲವೆಂದು ವಿಶೇಷ ನ್ಯಾಯಾಲವು ಅಭಿಪ್ರಾಯಪಟ್ಟರೆ, ನ್ಯಾಯಾಲಯವು ದೂರನ್ನು ವಜಾಗೊಳಿಸತಕ್ಕದ್ದು ಅಥವಾ ಮುಂದಿನ ವ್ಯವಹರಣೆಗಳನ್ನು ಕೈಬಿಡತಕ್ಕದ್ದು ಹಾಗೂ ಅಂಥ ಪ್ರತಿಯೊಂದು ಪ್ರಕರಣದಲ್ಲಿ ಅದು ಸಂಕ್ಷಿಪ್ತವಾಗಿ ಕಾರಣಗಳನ್ನು ದಾಖಲಿಸತಕ್ಕದ್ದು:

ಮತ್ತು ಪರಂತು, ಈ ಅಧ್ಯಾದೇಶದ ಅಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದ ಸಮನುಗಳ ಪ್ರಕರಣದ ವಿಚಾರಣೆಯ ಕ್ರಮವು, ವಾರೆಂಟು ಪ್ರಕರಣಗಳ ವಿಚಾರಣೆಗಾಗಿರುವ ಕಾರ್ಯವಿಧಾನದ ಅನುಸಾರವಾಗಿ ವಿಚಾರಿಸತಕ್ಕ ಅಪರಾಧವೆಂದು ವಿಶೇಷ ನ್ಯಾಯಾಲಯಕ್ಕೆ ತೋರಿದರೆ, ವಾರೆಂಟು ಪ್ರಕರಣಗಳ ವಿಚಾರಣೆಗಾಗಿ ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಉಪಬಂಧಿಸಿದ ವಿಧಾನದಲ್ಲಿ ಪ್ರಕರಣವನ್ನು ಮರುಆಲಿಸಲು ಮುಂದುವರೆಯಬಹುದು ಮತ್ತು ವಿಚಾರಿಸಬಹುದಾದ ಯಾವುದೇ ಸಾಕ್ಷಿಯನ್ನು ಪುನಃಕರೆಸಬಹುದು."

**4. 10-ಎ ಮತ್ತು 10-ಬಿ ಹೊಸ ಪ್ರಕರಣದ ಸೇರ್ಪಡೆ.**-ಮೂಲ ಅಧಿನಿಯಮದ 10ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"10-ಎ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.**-ವಿಶೇಷ ನ್ಯಾಯಾಲಯದ ಮೂಲಕ ನಿರ್ಧರಿಸಬೇಕಾದುದು ಎಂದು ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಅಗತ್ಯಪಡಿಸಲಾದ ಸರ್ಕಾರದ ಯಾವುದೇ ಭೂಮಿ ಅಥವಾ ಇತರ ವಿಷಯಕ್ಕೆ ಸಂಬಂಧಿಸಿದ ಯಾವುದೇ ವಿವಾದ, ಪ್ರಶ್ನೆ ಅಥವಾ ಇತರ ವಿಷಯದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆ ಅಥವಾ ಇತರೆ ಕಾನೂನಿನ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**10-ಬಿ ವಿಶೇಷ ನ್ಯಾಯಾಲಯಗಳು ವ್ಯವಹರಣೆಗಳನ್ನು ಶೀಘ್ರವಾಗಿ ನಡೆಸುವುದು ಮತ್ತು ತನ್ನ ತೀರ್ಮಾನದ ಪ್ರತಿಗಳನ್ನು ಪಕ್ಷಕಾರರಿಗೆ ಒದಗಿಸುವುದು.**-ಭೂ ಕಬಳಿಕೆಗೆ ಸಂಬಂಧಿಸಿದಂತೆ ಯಾವುದೇ ವಿವಾದ, ಪ್ರಶ್ನೆ ಅಥವಾ ಇತರ ವಿಷಯದ ನಿರ್ಧರಣೆಗಾಗಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದಾಗಲೆಲ್ಲಾ ಅಥವಾ ಸ್ವಯಂ ಪ್ರೇರಣೆಯಿಂದ ವ್ಯವಹರಣೆಯನ್ನು ಹೂಡಿದಾಗ, ವಿಶೇಷ ನ್ಯಾಯಾಲಯವು ಅಂಥ ವ್ಯವಹರಣೆಯನ್ನು ಹೂಡಿದ ದಿನಾಂಕದಿಂದ ಆರು

ತಿಂಗಳ ಅವಧಿಯೊಳಗೆ ವ್ಯವಹರಣೆಗಳನ್ನು ಮುಕ್ತಾಯಗೊಳಿಸತಕ್ಕದ್ದು ಮತ್ತು ವಿವಾದದ ಪ್ರತಿಯೊಬ್ಬ ಪಕ್ಷಕಾರನಿಗೂ ಲಿಖಿತದಲ್ಲಿ ತನ್ನ ತೀರ್ಮಾನವನ್ನು ನೀಡತಕ್ಕದ್ದು."

**5.17-ಎ ಹೊಸ ಪ್ರಕರಣದ ಸೇರ್ಪಡೆ.-**ಮೂಲ ಅಧಿನಿಯಮದ 17ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``**17-ಎ. ಅಪೀಲುಗಳು.-** (1) ಪಕ್ಷಕಾರರ ನಾಗರೀಕ ಹೊಣೆಗಾರಿಕೆಯನ್ನು ನಿರ್ಧರಿಸುವ ವಿಶೇಷ ನ್ಯಾಯಾಲಯದ ಮೂಲಕ ಯಾವುದೇ ಅಂತಿಮ ಆದೇಶದ ವಿರುದ್ಧದ ಯಾವುದೇ ಅಪೀಲು,-

(i) ಈ ಉಪಪ್ರಕರಣದ ಅಡಿಯಲ್ಲಿನ ಅಪೀಲಿನಲ್ಲಿ ಅಪೀಲು ವಿವರಣಾ ಪತ್ರವು ಅಪೀಲಿನಲ್ಲಿ ಒಳಗೊಂಡಿರುವ ಮುಖ್ಯವಾದ ಕಾನೂನು ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ನಿರೂಪಿಸತಕ್ಕದ್ದು ;ಮತ್ತು

(ii) ಹಾಗೆ ರೂಪಿಸಲಾದ ಪ್ರಶ್ನೆಯ ಮೇಲಿನ ಅಪೀಲನ್ನು ಆಲಿಸತಕ್ಕದ್ದು ಮತ್ತು ಅಪೀಲಿನ ಅಹವಾಲನ್ನು ಆಲಿಸಿದಾಗ ಪ್ರತಿವಾದಿಗೆ ಅಂಥ ಯಾವುದೇ ಪ್ರಶ್ನೆಯನ್ನು ಒಳಗೊಂಡಿಲ್ಲವೆಂದು ವಾದ ಮಾಡುವುದಕ್ಕೆ ಅನಮತಿಸತಕ್ಕದ್ದು,

- ಎಂಬ ಮುಖ್ಯವಾದ ಕಾನೂನಿನ ಪ್ರಶ್ನೆಯನ್ನು ಪ್ರಕರಣವು ಒಳಗೊಂಡಿದೆ ಎಂದು ಉಚ್ಚನ್ಯಾಯಾಲಯವು ಮನಗಂಡರೆ, ಅದನ್ನು ಉಚ್ಚನ್ಯಾಯಾಯಲದ ಮುಂದೆ ಹೂಡತಕ್ಕದ್ದು: (Lie)

ಪರಂತು, ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಉಚ್ಚನ್ಯಾಯಾಲಯದ ಮುಂದೆ ಅಪೀಲನ್ನು ದಾಖಲು ಮಾಡತಕ್ಕದ್ದು:

ಮತ್ತು ಪರಂತು, ಅಪೀಲನ್ನು ಮೂವತ್ತು ದಿನಗಳ ಅವಧಿಗೆ ಮೀರಿ ದಾಖಲು ಮಾಡಿದ್ದಲ್ಲಿ, ತಕ್ಕ ಕಾರಣಗಳನ್ನು ತೋರಿಸಿದಾಗ ಆದರೆ ಅರವತ್ತು ದಿನಗಳ ಅವಧಿಯನ್ನು ಮೀರದಂತೆ ಉಚ್ಚನ್ಯಾಯಾಲಯವು ಅದನ್ನು ಮನ್ನಾ ಮಾಡಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಕ್ರಿಮಿನಲ್ ಹೊಣೆಗಾರಿಕೆಯನ್ನು ನಿರ್ಧರಿಸುವ ನಿರಪರಾಧದ ನಿರ್ಣಯ ಅಥವಾ ಅಪರಾಧದ ನಿರ್ಣಯದ ಆದೇಶದ ವಿರುದ್ಧವಾದ ಯಾವುದೇ ಅಪೀಲು ಉಚ್ಛನ್ಯಾಯಾಲಯಕ್ಕೆ ಬರತಕ್ಕದ್ದು. ವಿಶೇಷ ನ್ಯಾಯಾಲಯಗಳು, ಉಚ್ಚನ್ಯಾಯಾಲಯದ ಸ್ಥಳೀಯ ಮಿತಿಗಳೊಳಗೆ ಪ್ರಕರಣಗಳನ್ನು ಅಧಿವಿಚಾರಣೆ ಮಾಡುತ್ತಿರುವ ಸೆಷನ್ಸ್ ನ್ಯಾಯಾಲಯಗಳಿಗಿದ್ದಂಥದ್ದೇ, ಉಚ್ಚ ನ್ಯಾಯಾಲಯದ ಕುರಿತು ಕ್ರಿಮಿನಲ್

ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) XXIX ಮತ್ತು XXXನೇ ಅಧ್ಯಾಯಗಳ ಮೂಲಕ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು, ಅನ್ವಯವಾಗುವಷ್ಟರ ಮಟ್ಟಿಗೆ, ಉಚ್ಚನ್ಯಾಯಾಲಯವು ಚಲಾಯಿಸಬಹುದು."

**6. 22ನೇ ಹೊಸ ಪ್ರಕರಣದ ಸೇರ್ಪಡೆ.**-ಮೂಲ ಅಧಿನಿಯಮದ 22ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"22. ರದ್ಧತಿ (Abatement).-** ಈ ಅಧಿನಿಯಮದ 2ನೇ ಪ್ರಕರಣದ (ಡಿ) ಉಪಖಂಡದ ಪರಂತುಕದ ಅಡಿಯಲ್ಲಿ ಹೊರತುಪಡಿಸಲಾದ ಭೂಮಿಯ ಸಂಬಂಧದಲ್ಲಿ ಬಾಕಿಯಿರುವ ಮತ್ತು ಉದ್ದೇಶಿಸಲಾದ ಎಲ್ಲಾ ವ್ಯವಹರಣೆಗಳು ಕರ್ನಾಟಕ ಭೂಕಬಳಿಕೆ ನಿಷೇಧ (ತಿದ್ದುಪಡಿ) ಅಧ್ಯಾದೇಶ, 2020ರ ಪ್ರಾರಂಭದ ದಿನಾಂಕದಂದು ರದ್ದಾಗತಕ್ಕದ್ದು."

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಇಲಾಖೆ.

## KARNATAKA ORDINANCE NO. 06 OF 2020

## THE KARNATAKA LAND GRABBING PROHIBITION (AMENDMENT) ORDINANCE, 2020

(Promulgated by the Governor of Karnataka in the Seventy first year of the Republic of India and first published in the Karnataka Gazette Extra-ordinary on the 10th day of April, 2020)

An Ordinance further to amend the Karnataka Land Grabbing Prohibition Act, 2011, (Karnataka Act 38 of 2014) and for matters connected therewith or incidental thereto;

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to

take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement**.– (1) This Ordinance may be called the Karnataka Land Grabbing Prohibition (Amendment) Ordinance, 2020

(2) It shall come into force at once.

**2. Amendment of Section 2**.- In section 2 of the Karnataka Land Grabbing Prohibition Act, 2011, (Karnataka Act 38 of 2014) (hereinafter referred to as the Principal Act) after clause (d), the following proviso shall be and shall always be deemed to have been inserted, namely:-

"Provided that 'land' shall not include lands in respect of which applications for grant are pending on the date of commencement of this Ordinance,-

(a) under sections 94A, 94B, 94C and 94CC of the Karnataka Land Revenue Act, 1964 (Karnataka Act 12 of 1964);

(b) under the Scheduled Tribes and other Traditional Forest Dwellers (Recognition of Forest Rights) Act, 2006 (Central Act 2 of 2007);"

**3. Amendment of section 9.-** In section 9 of the Principal Act,-

(i) for sub-section (3), the following shall be substituted, namely:-

"(3) All alleged acts of land grabbing shall be tried only by the Special Court constituted for the area in which the land is situated, or where there are more Special Courts than one for such area, by such one of them as may be specified in this behalf by the Government."

(ii) in sub-section (5), for clause (b), the following shall be substituted, namely:-

"(b) the Special Court may, if it thinks fit, try in a summary manner any offence under this Act:

Provided that, if the Special Court is of the opinion that there are no sufficient grounds for proceeding, the Court shall dismiss the complaint or drop further proceedings and in every such case it shall briefly record reasons.

Provided further that, the course of the trial of summons case relating to an offence under this Ordinance, it appears to the special Court that in the interests of justice, the offence shall be tried in accordance with the procedure for trial of warrant cases, the special Court may proceed to re-hear the case in the manner provided by the code of Criminal procedure, 1973 (Central Act 2 of 1974) for the trial of warrant-cases and may recall any witness who may have been examined."

**4. Insertion of new section 10-Aand 10-B.-** After section 10 of the principal Act, the following shall be inserted, namely:-

"**10-A. Bar of jurisdiction of civil Courts.-** No suit or other legal proceeding shall lie in any civil court in respect of any dispute, question or other matter relating to any Government land or other matter which is required by or under this Act to be determined by a special Court.

**10-B. Special Court to hold proceedings expeditiously and to furnish to the parties copies of its decision.-** Whenever an application is made to the special Court or when proceedings are initiatedsuo moto for the determination of any dispute, question or other matter relating to grabbed land, the special Court shall conclude its proceedings within a period of six months from the date of initiation of such proceedings and give its decision in writing to each of the parties to the dispute."

**5. Insertion of new section 17-A.-** After section 17 of the principal Act, the following shall be inserted, namely:-

"**17-A. Appeals.-** (1) An appeal against any final order by the special Court determining the civil liability of the parties shall lie to the High Court, if the High Court is satisfied that the case involves a substantial question of law,-

(i) in an appeal under this sub section, the memorandum of appeal shall precisely state the substantial question of law involved in the appeal; and

(ii) the appeal shall be heard on the question so formulated and the respondent shall, at the hearing of the appeal be allowed to argue that the case does not involve any such question:

Provided that, appeal shall be filed before the High Court Within Thirty days from the date of the order.

Provided further that, if the appeal is field beyond the period of 30 days; the High Court shall condone the same, on sufficient cause being shown, but not beyond a period of Sixty days.

(2) Any appeal against order of acquittal or conviction determining any criminal liability under this Act shall lie to the High Court. The High Court may exercise, so far as may be applicable, all the powers conferred by the chapters XXIX and XXX of the Code of Criminal Procedure, 1973 (Central Act 2 of 1974) on a High Court as if, the special Court were a court of sessions trying cases within the local limits of the jurisdiction of the High Court".

**6. Insertion of new section 22.-** After section 21 of the Principal Act, the following shall be inserted, namely:-

"**22. Abatement.-** All proceedings pending and completed with respect to land as excluded under the proviso to sub-clause (d) of section 2 of this Act, on the date of commencement of the Karnataka Land grabbing (Prohibition) (Amendment) Ordinance, 2020 shall stand abated."

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka,

**(K. DWARAKANATH BABU)**
Secretary to Government
Department of Parliamentary Affairs

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2020.04.11 16:52:59 +05'30'